**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ**

**ಸಿ.ಸಿ.ನಂಬರ್ಃ 899/2024**

ಪಿರ್ಯಾದಿಃ ವಿಕಾಶ ಕೋ ಅಫ್ ಕ್ರೆಡಿಟ್ ಸೊಸೈಟಿ ನಿ ತಿಳವಳ್ಳಿ
ಇದರ ಪರವಾಗಿ ವ್ಯವಸ್ಥಾಪಕರು,
ಶಿವಕುಮಾರ ತಂದೆ ಅಪ್ಪುಶೆಟ್ ಶೆಟ್ಟಿ
ವಯಸ್ಸು 34 ವರ್ಷ, ಉಃ ವ್ಯವಸ್ಥಾಪಕರು
ಸಾಃ ತಿಳವಳ್ಳಿ, ತಾಃ ಹಾನಗಲ್ಲ, ಜಿಃ ಹಾವೇರಿ.

ವಿರುದ್ಧ

ಆರೋಪಿಃ ನಾಗರಾಜ ತಂದೆ ಪ್ರಭಾಕರ ರೇವಣಕರ
ವಯಸ್ಸುಃ 39 ವರ್ಷ, ಉಃ ವ್ಯಾಪಾರ
ಸಾಃ ತಿಳವಳ್ಳಿ, ತಾಃ ಹಾನಗಲ್ಲ, ಜಿಃ ಹಾವೇರಿ.

**:ಆರೋಪಣೆ:**

ಪಿರ್ಯಾದುದಾರನ ವಿಕಾಶ ಕೋ ಅಫ್ ಕ್ರೆಡಿಟ್ ಸೊಸೈಟಿ ನಿ ತಿಳವಳ್ಳಿ ಎಂಬ ಸೊಸೈಟಿಯಲ್ಲಿ ಆರೋಪಿಯಾದ ನೀವು ದಿಃ 22-04-2021 ರಂದು ವ್ಯಾಪಾರದ ಅಭಿವೃದ್ಧಿಗಾಗಿ ಕರಾರು ಪತ್ರ ಹಾಗೂ ಇತ್ಯಾದಿ ದಸ್ತಾವೇಜುಗಳನ್ನು ಬರೆದುಕೊಟ್ಟು ರೂ.8,00,000/- ಗಳ ಸಾಲವನ್ನು ಪಡೆದಿದ್ದು, ತದನಂತರ ಆರೋಪಿಯಾದ ನೀವು ಕಾಲ ಕಾಲಕ್ಕೆ ಅಸಲು ಮತ್ತು ಬಡ್ಡಿಯನ್ನು ಮರು ಪಾವತಿ ಮಾಡದೇ ಬಂದಿದ್ದು, ನಂತರ ಸದರಿ ಸಾಲದ ಮರು ಪಾವತಿಯ ಉದ್ದೇಶಕ್ಕಾಗಿ 2024 ಇಸ್ವಿಯ ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಕೇಳಿದಾಗ, ಆರೋಪಿಯಾದ ನೀವು ಖಾತೆಗೆ ಹೊಂದಿದ್ದ ಬ್ಯಾಂಕ್ ಆಫ್ ಬರೋಡಾ, ಶಾಖೆ ತಿಳವಳ್ಳಿ, ಚೆಕ್ ನಂಃ 002179 ರ ಚೆಕ್‌ನಲ್ಲಿ ದಿಃ 12-03-2024 ನ್ನು ಮತ್ತು ರೂ.11,30,000/-ಗಳನ್ನು ನಮೂದಿಸಿ ಸಹಿ ಮಾಡಿ ಪಿರ್ಯಾದಿಗೆ ನೀಡಿದ್ದು, ನಂತರ ಪಿರ್ಯಾದಿಯು ತಾನು ಖಾತೆ ಹೊಂದಿದ್ದ ಬ್ಯಾಂಕ್ ಆಫ್ ಬರೋಡಾ, ತಿಳವಳ್ಳಿ ಶಾಖೆಗೆ ನಗದೀಕರಣಕ್ಕಾಗಿ ಜಮೆ ಮಾಡಿದ್ದು, ಸದರಿ

ಬ್ಯಾಂಕ್ ನವರು ದಿಃ14-03-2024 ರಂದು ಆರೋಪಿಯಾದ ನಿಮ್ಮ "**ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು**" (**Insufficient balance**) ಎಂಬ ಹಿಂಬರಹದೊಂದಿಗೆ ವಾಪಾಸು ನೀಡಿರುತ್ತಾರೆ. ನಂತರ ಪಿರ್ಯಾದಿಯು ತಮ್ಮ ವಕೀಲರ ಮೂಲಕ ಸಾಲದ ಹಣವನ್ನು ಮರಳಿ ನೀಡುವಂತೆ ದಿಃ27-03-2024 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ನೀಡಿದ್ದು, ಸದರಿ ನೋಟೀಸನ್ನು ಆರೋಪಿಯಾದ ನೀವು ತೆಗೆದುಕೊಳ್ಳದ ಕಾರಣ ದಿಃ01-04-2024 ರಂದು ಮರಳಿ ಬಂದಿದ್ದು, ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಮರಳಿ ಪಾವತಿ ಮಾಡದೇ ಆತನಿಗೆ ಮೋಸ ಮಾಡುವ ದುರುದ್ದೇಶದಿಂದ ಸದರಿ ಚೆಕ್‌ನ್ನು ನೀಡಿ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ 138 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆಃ1) ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿದೆಯಾ? ಅದು ನಿನಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಶ್ನೆಃ2) ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿತನಿಗೆ ದಿನಾಂಕಃ 29-01-2025 ರಂದು ಆರೋಪಣೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಹಾನಗಲ್ಲ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,
ದಿನಾಂಕಃ 29-01-2025 ನ್ಯಾಯಾಲಯ, ಹಾನಗಲ್ಲ .

ಆರೋಪಿಯ ಸಹಿಃ